# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 146 (205)
2. ಸದಸ್ಯರ ಹೆಸರು : ಶ್ರೀ ಬಿ.ಎಂ. ಫಾರೂಖ್
   (ವಿಧಾನಸಭೆಯಿಂದ ಚುನಾಯಿತರಾದವರು)
3. ಉತ್ತರಿಸುವ ದಿನಾಂಕ : 14.02.2023
4. ಉತ್ತರಿಸುವ ಸಚಿವರು : ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ UPCL ಕಂಪನಿಗೆ ಸೇರಿದ ಮತ್ತು 28/1ರ ಅಡಿಯಲ್ಲಿ ನೋಟಿಫೈ ಆಗಿರುವ ಸುಮಾರು 500 ಎಕರೆಗೂ ಹೆಚ್ಚು ಭೂಮಿ ಬಳಕೆಯಾಗದೆ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಮೆ॥ ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ (UPCL) ರವರ 2800 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗಾಗಿ ಉಡುಪಿ ಜಿಲ್ಲೆ, ಕಾಪು ತಾಲ್ಲೂಕು, ಸಾಂತೂರು ಗ್ರಾಮದ 294.55 ಎಕರೆ ಮತ್ತು ಎಲ್ಲೂರು ಗ್ರಾಮದ 281.90 ಎಕರೆ ಒಟ್ಟು 576.45 ಎಕರೆ ಜಮೀನನ್ನು ಭೂಸ್ವಾಧೀನಪಡಿಸಲು ದಿನಾಂಕ: 20.01.1995 ಮತ್ತು 21.05.1998 ರಂದು ಪ್ರಾಥಮಿಕ ಅಧಿಸೂಚನೆಗಳನ್ನು ಕ್ರಮವಾಗಿ ಹೊರಡಿಸಲಾಗಿದೆ.<br><br>ಸದರಿ ಜಮೀನಿನ ಅಂತಿಮ ಅಧಿಸೂಚನೆ ಪ್ರಸ್ತಾವನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಪೂರ್ವದಲ್ಲಿ ಪ್ರಸ್ತಾವಿತ ಭೂಸ್ವಾಧೀನ ವೆಚ್ಚದ ತಾತ್ಕಾಲಿಕ ಭೂಮೌಲ್ಯ ಮತ್ತು ಮಂಡಳಿಯ ಸೇವಾಶುಲ್ಕ ಸೇರಿ ಒಟ್ಟು ರೂ.341.59 ಕೋಟಿ ಮೊತ್ತವನ್ನು ಕೆ.ಐ.ಎ.ಡಿ.ಬಿ.ಗೆ ಠೇವಣಿ ಮಾಡುವಂತೆ ಕೋರಿ ಯೋಜನಾ ಪ್ರವರ್ತಕರಾದ ಮೆ: ಉಡುಪಿ ಪವರ್ ಕಾರ್ಪೋರೇಷನ್ ಲಿಮಿಟೆಡ್ ಇವರಿಗೆ ದಿನಾಂಕ: 22.12.2016 ರಿಂದ 01.06.2022 ರವರೆಗೆ 4 ಬಾರಿ ನೆನಪೋಲೆಗಳನ್ನು ನೀಡಲಾಗಿದ್ದರೂ ಸಹ ಸದರಿಯವರು ಮಂಡಳಿಗೆ ಹಣ ಠೇವಣಿ ಮಾಡಿರುವುದಿಲ್ಲ. |
| (ಆ) | ಸದರಿ ಬಳಕೆಯಾಗದೆ ಉಳಿದಿರುವ ಭೂಮಿಯನ್ನು ಹೊಸ ಕೈಗಾರಿಕಾ ಉದ್ದೇಶಕ್ಕಾಗಿ ಬಿಡುಗಡೆ ಹಂಚಿಕೆ ಮಾಡಿ ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಸರ್ಕಾರದ ನಿಲುವುಗಳೇನು; | |
| (ಇ) | ಉದ್ದಿಮೆಗಳ ಸಾಂದ್ರತೆ | |

| | | |
|---|---|---|
| | ಹೆಚ್ಚಾಗಿದ್ದು ಹೊಸ ಕೈಗಾರಿಕೆಗಳಿಗೆ ಮೂಲಸೌಕರ್ಯ ಕೊರತೆಯೂ ಸೇರಿ ಕಷ್ಟಕರವಾಗಿದ್ದು UPCL ಕಂಪನಿಯ ಬಳಕೆಯಾಗದ ಭೂಮಿಯನ್ನು ಸದುಪಯೋಗಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ಕೆ.ಐ.ಎ.ಡಿ.ಬಿ.ಯ ವಿಶೇಷ ಭೂಸ್ವಾಧೀನಾಧಿಕಾರಿ, ಕಾರ್ಯಪಾಲಕ ಅಭಿಯಂತರ, ಮಂಗಳೂರು ಮತ್ತು ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಉಡುಪಿ ಇವರುಗಳು ದಿನಾಂಕ: 20.12.2022ರಂದು ಸದರಿ ಜಮೀನಿನ ಸ್ಥಳ ಪರಿಶೀಲನೆ ನಡೆಸಿ ಈ ಹಿಂದೆ UPCL ರವರ ಯೋಜನೆಗಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿರುವ 576.45 ಎಕರೆ ಜಮೀನಿನ ಜೊತೆಗೆ ಹೊಸದಾಗಿ 365.50 ಎಕರೆ ಒಟ್ಟು 941.95 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟಿರುವ ಹಿನ್ನೆಲೆಯಲ್ಲಿ, ದಿನಾಂಕ: 12.01.2023 ರಂದು ನಡೆದ ಮಂಡಳಿ ಸಭೆಯಲ್ಲಿ ಮಂಡಳಿಯು ಕೈಗಾರಿಕಾ ಪ್ರದೇಶಕ್ಕಾಗಿ ಸದರಿ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಮುಂದುವರೆಸಲು ಹಾಗೂ ಈ ಜಮೀನಿನ ಜೊತೆಗೆ 365.50 ಎಕರೆ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಹೆಚ್ಚುವರಿಯಾಗಿ ಭೂಸ್ವಾಧೀನಪಡಿಸಲು ನಿರ್ಣಯಿಸಲಾಗಿದೆ. |

ಸಂಖ್ಯೆ: ಸಿಐ 14 ಐಎಪಿ (ಇ) 2023

(ಡಾ|| ಮುರುಗೇಶ್ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು